# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 328 |
| **ಸದಸ್ಯರ ಹೆಸರು** | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 13.09.2022 |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |
| **ಪ್ರಶ್ನೆ** | **ಉತ್ತರ** |
| ಅ) ರಾಜ್ಯದಲ್ಲಿ ಸೆಮಿ-ಕಂಡಕ್ಟರ್ಸ್ ತಯಾರಿಕೆ ಘಟಕಗಳ ಸ್ಥಾಪನೆಗೆ ಉತ್ತೇಜನ ನೀಡಲು ಸರ್ಕಾರ ಹೊರತಂದಿರುವ ಕೈಗಾರಿಕಾ ನೀತಿ ಯಾವುದು (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸೆಮಿಕಂಡಕ್ಟರ್ಸ್ ತಯಾರಿಕೆ ಘಟಕಗಳ ಸ್ಥಾಪನೆಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರವು ಕರ್ನಾಟಕ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ತಯಾರಿಕೆ (ಇಎಸ್‌ಡಿಎಂ) ನೀತಿಯನ್ನು ಜಾರಿಗೆ ತಂದಿದೆ ಹಾಗೂ ಇ.ಎಸ್.ಡಿ.ಎಂ ವಲಯಕ್ಕಾಗಿ ವಿಶೇಷ ಪ್ರೋತ್ಸಾಹಕಗಳ ಯೋಜನೆ (2020-25) ಯನ್ನು ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಟಿ 101 ಎಡಿಎಂ 2020, ದಿನಾಂಕ:07.09.2020 ರಲ್ಲಿ ಪ್ರಕಟಿಸಿದೆ. |
| ಆ) ರಾಜ್ಯ ಸರ್ಕಾರ ಇಸ್ರೇಲ್ ದೇಶದೊಂದಿಗೆ ಐಟಿ-ಬಿಟಿ ವಲಯ ಸೇರಿದಂತೆ ಹಲವಾರು ವಲಯಗಳಲ್ಲಿ ತಂತ್ರಜ್ಞಾನ ವರ್ಗಾವಣೆ, ತರಬೇತಿ ಮುಂತಾದ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಒಡಂಬಡಿಕೆ (MOU) ಮಾಡಿಕೊಂಡಿರುವುದು ನಿಜವೇ; (ಹಾಗಿದ್ದಲ್ಲಿ, ಒಡಂಬಡಿಕೆ ಪತ್ರ ಒಳಗೊಂಡಂತೆ ಪೂರ್ಣ ವಿವರ ನೀಡುವುದು) | ಐಟಿ, ಬಿಟಿ ಇಲಾಖೆಯ ವತಿಯಿಂದ ಇಸ್ರೇಲ್ ದೇಶದೊಂದಿಗೆ ಐಟಿ-ಬಿಟಿ ವಲಯ ಸೇರಿದಂತೆ ಹಲವಾರು ವಲಯಗಳಲ್ಲಿ ತಂತ್ರಜ್ಞಾನ ವರ್ಗಾವಣೆ, ತರಬೇತಿ ಮುಂತಾದ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಒಡಂಬಡಿಕೆಯನ್ನು (MoU) ಮಾಡಿಕೊಂಡಿರುವುದಿಲ್ಲ. |
| ಇ) ರಾಜ್ಯ ಸರ್ಕಾರ ಇಸ್ರೇಲ್ ಕಂಪನಿ ಟವರ್ ಸೆಮಿ-ಕಂಡಕ್ಟರ್ಸ್ ಮತ್ತು ISMC ಸಹಯೋಗದೊಂದಿಗೆ ಸೆಮಿಕಾನ್ ಇಂಡಿಯಾ ಸೆಮಿ-ಕಂಡಕ್ಟರ್ ಹಬ್ ಸ್ಥಾಪಿಸಲು ಮುಂದಾಗಿದ್ದು, ಈ ಸೆಮಿ–ಕಂಡಕ್ಟರ್ ತಯಾರಿಕೆ ಘಟಕಗಳು ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ ಮತ್ತು ಘಟಕಗಳ ಕಾರ್ಯನಿರ್ವಹಣೆ ಯಾವ ಹಂತದಲ್ಲಿವೆ? (ಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರದ ಐಟಿ, ಬಿಟಿ ಇಲಾಖೆಯಿಂದ ISMC Analog Fab Pvt. Ltd. ರವರೊಂದಿಗೆ Analog Semiconductor Fab ಘಟಕವನ್ನು ಸ್ಥಾಪಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ISMC ಒಂದು Consortium ಆಗಿದ್ದು, ಇದರಲ್ಲಿ ಇಸ್ರೇಲ್‌ನ Tower Semiconductors ರವರು ತಂತ್ರಜ್ಞಾನ ಪಾಲುದಾರರಾಗಿರುತ್ತಾರೆ. ಮುಂದುವರೆದು, ಈ ಸೆಮಿಕಂಡಕ್ಟರ್ ತಯಾರಿಕಾ ಘಟಕವನ್ನು ISMC ರವರು ಮೈಸೂರಿನಲ್ಲಿ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿರುತ್ತಾರೆ. ಆದರೆ ಈ ಯೋಜನೆಗೆ ಅಗತ್ಯವಿರುವ ಭಾರತ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿದೆ. |

(ಐಟಿಬಿಟಿ 93 ಎಲ್‌ಸಿಎಂ 2022)

**(ಡಾ|| ಸಿ.ಎನ್. ಅಶ್ವಥ್ ನಾರಾಯಣ)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಮತ್ತು ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.